ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

**ಸಂಖ್ಯೆ:-ಸಿ1(6)ವಿ.ವೃಂ ವರ್ಗಾವಣೆ: 04/2011-12** **ದಿನಾಂಕ: 26-04-2011**

ಅಧಿಕೃತ ಜ್ಞಾಪನ

ವಿಷಯ:2011ನೇ ಸಾಲಿನ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಮಾರ್ಗಸೂಚಿ.

ಉಲ್ಲೇಖ:1.ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿ:01.09.2007
2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:15.10.2007
3.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿ:14.11.2007
4.ಸರ್ಕಾರದ ಆದೇಶ ಸಂಖ್ಯೆ:ಇಡಿ 7 ಇಟಿಆರ್ 2011 ದಿ: 20.04.2011
5.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2009 ದಿ:23.04.2011.

-&&&-

ಉಲ್ಲೇಖ-1ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ಜಾರಿಗೆ ಬಂದಿರುತ್ತದೆ. ಇದರ ಅನ್ವಯ ಉಲ್ಲೇಖ-2ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ನ್ನು ರೂಪಿಸಲಾಗಿದೆ. ಉಲ್ಲೇಖ-3ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ.173.ಇಟಿಆರ್.2007 ದಿನಾಂಕ: 14.11.2007ರಲ್ಲಿ ಎ, ಬಿ, ಸಿ, ವಲಯದ ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿಯನ್ನು ಅಧಿಸೂಚಿಸಲಾಗಿದೆ. ಉಲ್ಲೇಖ-4ರಲ್ಲಿ 2011ರ ಸಾಲಿನ ಮಟ್ಟಿಗೆ ಏಪ್ರಿಲ್ ಮತ್ತು ಮೇ ತಿಂಗಳ ಜೊತೆಗೆ ಜೂನ್ 18ರೊಳಗೆ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣ ಗೊಳಿಸಲು ಆದೇಶಿಸಲಾಗಿದೆ. ಉಲ್ಲೇಖ-5ರಲ್ಲಿ ನಿಯಮಗಳಲ್ಲಿನ ಕೆಲವೊಂದು ಅಂಶಗಳಿಗೆ ತಿದ್ದುಪಡಿ/ಮಾರ್ಪಾಡು ಮಾಡಲಾಗಿದೆ.

ಮೇಲಿನ ಆದೇಶಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳ ವರ್ಗಾವಣೆಗಳನ್ನು 2011ರ ಏಪ್ರಿಲ್ / ಮೇ ಮತ್ತು ಜೂನ್ ಮಾಹೆಯ 18ನೇ ತಾರೀಖಿನೊಳಗೆ ನಡೆಸಬೇಕಾಗಿರುತ್ತದೆ. ವರ್ಗಾವಣೆ ಬಯಸುವವರು ಅರ್ಜಿಗಳನ್ನು On Line ಮೂಲಕ ಮಾತ್ರ ಸಲ್ಲಿಸಬೇಕಾಗಿರುತ್ತದೆ. ಖುದ್ದಾಗಿ ಅಥವಾ ಟಪಾಲು ಮೂಲಕ ಲಿಖಿತವಾಗಿ ಸಲ್ಲಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಪರಿಗಣಿಸಲಾಗುವುದಿಲ್ಲ. ವರ್ಗಾವಣೆ ಪ್ರಕ್ರಿಯೆಗೆ ವೇಳಾಪಟ್ಟಿಯನ್ನು ಕೆಳಗಿನಂತೆ ನಿಗದಿಪಡಿಸಿದೆ.

| ಕ್ರ.ಸಂ | ವಿವರ | ದಿನಾಂಕ | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| 1 | 2011ನೇ ಸಾಲಿನ ವರ್ಗಾವಣೆಯ ಬಗ್ಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ತರಬೇತಿ | 27-04-2011 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| 2 | ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ವೃಂದಬಲ ಮತ್ತು ಖಾಲಿ ಹುದ್ದೆಗಳನ್ನು up date ಮಾಡಬೇಕಾಗಿರುತ್ತದೆ. ಆದ್ದರಿಂದ ವೃಂದಬಲ ಮತ್ತು ಖಾಲಿ ಹುದ್ದೆಗಳ ಮಾಹಿತಿಯನ್ನು | 28-04-2011 ರಿಂದ 03-05-2011 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |

| | | | |
|---|---|---|---|
| | ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ on-line ನಲ್ಲಿ ಭರ್ತಿ ಮಾಡಲು ಕ್ರಮ ವಹಿಸುವುದು. | | |
| 3 | ಎ.ಬಿ.ಸಿ. ವಲಯಗಳಂತೆ ಉಪನಿರ್ದೇಶಕರ ಕಛೇರಿ/ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಡಯಟ್‌ಗಳು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕಛೇರಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ದಿನಾಂಕ | 28-04-2011 | ಜಿಲ್ಲಾ ಉಪನಿರ್ದೇಶಕರು (ಆಡಳಿತ)<br>ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ, ಬೆಂಗಳೂರು |
| 4 | ವರ್ಗಾವಣೆ ಬಯಸುವ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳಿಂದ ಅರ್ಜಿಗಳನ್ನು ಕರೆಯಲು ಪ್ರಕಟಣೆ | 28-04-2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4.ಉಪನಿರ್ದೇಶಕರು [ಆಡಳಿತ]<br>5.ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 5 | ವರ್ಗಾವಣೆ ಕೋರುವ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಅಂತರ್ಜಾಲದ [on line] ಮೂಲಕ ಇಲಾಖೆ ನಿಗದಿತ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸುವ ದಿನಾಂಕ | 28-04-2011 ರಿಂದ 10-05-2011 | ದೈಹಿಕ ಶಿಕ್ಷಣ ಪರಿವೀಕ್ಷಕರು/ ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು |
| 6 | ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಖಾಲಿ ಹುದ್ದೆಗಳ ಪ್ರಕಟಣೆ.<br>ಇಲಾಖಾ ವೆಬ್ ಸೈಟ್‌ನಲ್ಲಿ | 04-05-2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 7 | ಅರ್ಜಿ ಸಲ್ಲಿಸಿರುವ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಕಛೇರಿಗೆ ಹಾಜರಾಗಿ ಅಗತ್ಯ ದಾಖಲೆಗಳನ್ನು ನೀಡಿ ವರ್ಗಾವಣೆ ಅರ್ಜಿ ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯಲು ನಿಗಧಿಪಡಿಸಿದ ದಿನಾಂಕ | 28-04-2011 ರಿಂದ 12-05-2011 | ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಎಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು/ ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಅರ್ಜಿ ಸಲ್ಲಿಸಿರುವ ಎರಡು ದಿನಗಳ ಒಳಗಾಗಿ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಕಛೇರಿಗೆ ಖುದ್ದಾಗಿ ಹಾಜರಾಗುವುದು. |

| | | | |
|---|---|---|---|
| 8 | ಉಪನಿರ್ದೇಶಕರುಗಳ ಹಂತದಲ್ಲಿ ಅಂತರ್ಜಾಲದ [on line] ಮೂಲಕ ಅರ್ಜಿಗಳ ಪರಿಶೀಲನೆ, ಮಾಹಿತಿ ದೃಢೀಕರಣ ಹಾಗು ಅರ್ಜಿ ಅನುಮೋದನೆಗೆ ನಿಗಧಿ ಪಡಿಸಿದ ದಿನಾಂಕ | 28-04-2011 ರಿಂದ 12-05-2011 | ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 9 | ಉಪನಿರ್ದೇಶಕರು [ಆಡಳಿತ] ರವರು ಅಭ್ಯರ್ಥಿಗಳಿಂದ ಪಡೆದ ಆದ್ಯತೆಯ ಮೂಲ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ಮುದ್ದಾಂ ಸಲ್ಲಿಸಲು ಕೊನೆಯ ದಿನಾಂಕ. | 13-05-2011 | ಜಿಲ್ಲಾ ಉಪನಿರ್ದೇಶಕರು [ಆಡಳಿತ]<br>ಕೇಂದ್ರ ಕಛೇರಿಗಳ ಮುಖ್ಯಸ್ಥರು |
| 10 | ಪರಸ್ಪರ ವರ್ಗಾವಣೆ ಬಯಸಿರುವ ಅಧಿಕಾರಿಗಳ ತಾತ್ಕಾಲಿಕ ಪಟ್ಟಿ ಪ್ರಕಟಣೆ. ಇಲಾಖೆಯ ವೆಬ್‌ಸೈಟ್‌ನಲ್ಲಿ | 18-05-2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 11 | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಆದ್ಯತಾ ಪಟ್ಟಿ ಪ್ರಕಟಣೆ ಇಲಾಖೆಯ ವೆಬ್‌ಸೈಟ್‌ನಲ್ಲಿ | 18-05-2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 12 | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳನ್ನು ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸಲು ಕೊನೆಯ ದಿನಾಂಕ | 18-05-2011 ರಿಂದ 23-05-2011 | ಸಂಬಂಧಿಸಿದ ದೈಹಿಕ ಶಿಕ್ಷಣ ಪರಿವೀಕ್ಷಕರು/ ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು |
| 13 | ಬಂದಂತಹ ಆಕ್ಷೇಪಣೆಗಳನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಪರಿಶೀಲಿಸಿ ಆಯಾ ಆಯುಕ್ತರಿಗೆ ಸಲ್ಲಿಸಲು ಕೊನೆಯ ದಿನಾಂಕ [ಮುದ್ದಾಂ ತಲುಪಿಸುವುದು] | 24-05-2011 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 14 | 1. ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಅಂತಿಮ ಆದ್ಯಾತ ಪಟ್ಟಿ ಪ್ರಕಟಣೆ<br>2. ಪರಸ್ಪರ ವರ್ಗಾವಣೆ ಅಂತಿಮ ಪಟ್ಟಿ ಪ್ರಕಟಣೆ<br>3.ಖಾಲಿ ಹುದ್ದೆಗಳ ಅಂತಿಮ ಪಟ್ಟಿ ಪ್ರಕಟಣೆ ಇಲಾಖಾ ವೆಬ್‌ಸೈಟ್‌ನಲ್ಲಿ | 26-05-2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |

| | | | |
|---|---|---|---|
| 15 | 1. ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್‌ಗೆ ಹಾಜರಾಗುವ ದಿನಾಂಕ<br><br>2. ಪರಸ್ಪರ ವರ್ಗಾವಣೆ ಜಾರಿಗೊಳಿಸುವ ದಿನಾಂಕ | 04–06–2011<br><br>04–06–2011 | ಸಂಬಂಧಿಸಿದ ದೈಹಿಕ ಶಿಕ್ಷಣ ಪರಿವೀಕ್ಷಕರು/ ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು.<br><br>1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 16 | ಆಯಾ ಆಯುಕ್ತರ ವ್ಯಾಪ್ತಿಯೊಳಗೆ [ಘಟಕದೊಳಗೆ] ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | 06–06–2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |
| 17 | ಆಯಾ ಆಯುಕ್ತರ ವ್ಯಾಪ್ತಿಯ ಹೊರಗಿನ [ಅಂತರ ಘಟಕ] ಕೋರಿಕೆ ವರ್ಗಾವಣೆಗಳಿಗೆ ಕೌನ್ಸೆಲಿಂಗ್ | 06–06–2011 | 1.ಆಯುಕ್ತರ ಕಛೇರಿ, ಬೆಂಗಳೂರು<br>2.ಅಪರ ಆಯುಕ್ತರ ಕಛೇರಿ, ಧಾರವಾಡ<br>3.ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ |

2011ನೇ ಎಪ್ರಿಲ್/ಮೇ/ಜೂನ್ ಮಾಹೆಯಲ್ಲಿ ನಡೆಯುವ ಸಾಮಾನ್ಯ ವರ್ಗಾವಣೆಗೆ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಅಂತರ್ಜಾಲದ [On Line] ಮೂಲಕ ಅರ್ಜಿಗಳನ್ನು ಸಲ್ಲಿಸುವ/ಪರಿಶೀಲಿಸುವ ವಿಧಾನವನ್ನು ಈ ಕೆಳಗೆ ಪ್ಯಾರಾ 1 ರಿಂದ 17 ರಲ್ಲಿ ನೀಡಲಾಗಿದೆ.

**ವರ್ಗಾವಣಾ ಅರ್ಜಿಗಳು:–** ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿನಾಂಕ: 15.10.2007 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 6 ರಂತೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದಕ್ಕೆ ಸಂಬಂಧಪಟ್ಟ ವರ್ಗಾವಣೆ ಅರ್ಜಿಗಳನ್ನು [1. ಜ್ಯೇಷ್ಠತಾ ಘಟಕದ ಒಳಗೆ/ಘಟಕದ ಹೊರಗೆ. 2. ಪರಸ್ಪರ] ನಿರ್ದಿಷ್ಟ ಪಡಿಸಿರುವ ಎರಡು ಅರ್ಜಿ ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ **www.schooleducation.kar.nic.in** ನಲ್ಲಿ ಪ್ರಕಟಿಸಲಾಗುತ್ತದೆ. ಗ್ರೂಪ್–ಬಿ ಅಧಿಕಾರಿಗಳ ಅರ್ಜಿ ನಮೂನೆಯಲ್ಲಿಯೇ ನಿರ್ವಹಿಸುವ ಹುದ್ದೆ ವಿಭಾಗದಲ್ಲಿ P.E. Inspector o/o B.E.O ಹಾಗೂ Subject Inspector Craft ಎಂದು ಇದ್ದು ಇವನ್ನು ಆಯ್ಕೆ ಮಾಡಿ ಅರ್ಜಿಯಲ್ಲಿನ ಎಲ್ಲಾ ಅಂಶಗಳನ್ನು ಭರ್ತಿ ಮಾಡಬೇಕು.

**2011ನೇ ಸಾಲಿಗೆ ಅರ್ಜಿ ಸಲ್ಲಿಸುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದದವರಿಗೆ ಸೂಚನೆಗಳು**

1. **ಕೋರಿಕೆ ವರ್ಗಾವಣೆಗೆ On Line ನಲ್ಲಿ ಅರ್ಜಿ ಸಲ್ಲಿಸುವುದು:–** ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಕೋರಿಕೆ ಮೇಲೆ ವರ್ಗಾವಣೆಗೆ ಅರ್ಜಿ ಸಲ್ಲಿಸುವುದಾದಲ್ಲಿ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ On Line ನಲ್ಲಿ ಅರ್ಜಿಯನ್ನು ಭರ್ತಿ ಮಾಡಬೇಕು. ಮತ್ತು ಅರ್ಜಿ ಸಲ್ಲಿಸಿದ ಎರಡು ದಿನಗಳ ಒಳಗಾಗಿ ಉಪ ನಿರ್ದೇಶಕರ ಕಛೇರಿಗೆ ಸೇವಾ ಮಾಹಿತಿ ಪರಿಶೀಲನೆಗೆ ಖುದ್ದಾಗಿ ಹಾಜರಾಗತಕ್ಕದ್ದು.

2. **ಪರಸ್ಪರ ವರ್ಗಾವಣೆಗೆ On Line ನಲ್ಲಿ ಅರ್ಜಿ ಸಲ್ಲಿಸುವುದು:–** ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸುವವರು ಸಹ ನಿಗದಿಪಡಿಸಿರುವ ಕೊನೆಯ ದಿನಾಂಕದ ಒಳಗೆ On Line ನಲ್ಲಿ ಅರ್ಜಿ ಭರ್ತಿ ಮಾಡಬೇಕು. ಪರಸ್ಪರ ಅರ್ಜಿ ಸಲ್ಲಿಸುವ ಇಬ್ಬರು ಅಧಿಕಾರಿಗಳು ಒಂದೇ ಅರ್ಜಿಯಲ್ಲಿ ಮಾಹಿತಿಯನ್ನು ಭರ್ತಿ ಮಾಡಬೇಕು. ಮತ್ತು ಅರ್ಜಿ ಸಲ್ಲಿಸಿದ ಎರಡು ದಿನಗಳ ಒಳಗಾಗಿ ಅಯಾ ಉಪ ನಿರ್ದೇಶಕರ ಕಛೇರಿಗಳಿಗೆ ಸೇವಾ ಮಾಹಿತಿ ಪರಿಶೀಲನೆಗೆ ಖುದ್ದಾಗಿ ಹಾಜರಾಗತಕ್ಕದ್ದು. ಒಬ್ಬರಿಗಿಂತ ಹೆಚ್ಚಿಗೆ ಅಧಿಕಾರಿಗಳಿಗೆ ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ವರ್ಗಾವಣೆಗೆ ಪರಿಗಣಿಸುವುದಿಲ್ಲ.

3. **ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು:–** ಆದ್ಯತೆ ಬಯಸಿ ಅರ್ಜಿ ಸಲ್ಲಿಸುವವರು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007,ರ ಅನ್ವಯ ಹಾಗೂ ಅದರಡಿಯಲ್ಲಿ ರೂಪಿಸಲಾಗಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007, ರಂತೆ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ಅರ್ಜಿ ಸಲ್ಲಿಸತಕ್ಕದ್ದು, ಮತ್ತು ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ನೀಡತಕ್ಕದ್ದು. ಆದ್ಯತಾ ಪ್ರಕರಣಗಳ ವಿವರ ಕೆಳಗಿನಂತಿರುತ್ತದೆ.

[ಅ] **ಅತ್ಯಂತ ತೀವ್ರ ಖಾಯಿಲೆಯ ಪ್ರಕರಣಗಳು:–** ಅತ್ಯಂತ ತೀವ್ರತರವಾದ ಕಾಯಿಲೆಯ ಪ್ರಕರಣಗಳಲ್ಲಿ ಅಧಿನಿಯಮದ 6 [2] [4] ರಲ್ಲಿ ಸೂಚಿಸಿದಂತೆ ಶಿಕ್ಷಕರು ಅಥವಾ ಅವರ / ಅವಳ ಗಂಡ / ಹೆಂಡತಿ ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ನಿಯಮಾನುಸಾರ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

[ಆ] **ದೈಹಿಕ ಅಂಗವಿಕಲ ಪ್ರಕರಣಗಳು:–** ದೈಹಿಕ ಅಂಗವಿಕಲ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರ ವೈದ್ಯರಿಂದ ಪ್ರಮಾಣೀಕರಿಸಲಾದಂತೆ ಶೇ.40% ಕ್ಕಿಂತ ಹೆಚ್ಚಿನ ಅಂಗವಿಕಲತೆ ಇರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

[ಇ] **ವಿಧವ ಶಿಕ್ಷಕರ ಪ್ರಕರಣಗಳು:–** ಪತಿಯ ಮರಣ ಪ್ರಮಾಣ ಪತ್ರ ಅಥವಾ ಇತರೆ ಯಾವುದಾದರು ಒಂದು ದಾಖಲೆಯನ್ನು ಹಾಜರುಪಡಿಸುವುದು.

[ಈ] **ಸೈನಿಕ ಪ್ರಕರಣಗಳು:–** ಭಾರತೀಯ ರಕ್ಷಣಾ ಪಡೆ/ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಮಂತ್ರಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು) ಕಾರ್ಯನಿರ್ವಹಿಸುತ್ತಿರುವ/ಮೃತರಾಗಿರುವ ಅವಲಂಬಿತರಿಗೆ ಒಂದು ಸಲದ ಕ್ರಮವಾಗಿ/ನಿವೃತ್ತರಾಗಿರುವ ಅವಲಂಬಿತರಿಗೆ ಒಂದು ಸಲದ ಕ್ರಮವಾಗಿ/ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ ರವರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು.

**[ಉ] <u>ವಿವಾಹಿತ ಶಿಕ್ಷಕರ ಪ್ರಕರಣ:–</u>** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007ರ ನಿಯಮ 7 (1) (ಡಿ) ರಲ್ಲಿ ತಿಳಿಸಿರುವಂತೆ ಅಧಿನಿಯಮದ 6ನೇ ಪ್ರಕರಣದ (2) ಉಪ ಪ್ರಕರಣದ (1)ನೇ ಖಂಡದ ಪ್ರಕಾರ ಅಗತ್ಯ ಪ್ರಮಾಣ ಪತ್ರ ಸಲ್ಲಿಸಿ ವಿವಾಹಿತ ಶಿಕ್ಷಕರ ಪ್ರಕರಣದಡಿ ಆದ್ಯತೆ ಕೋರತಕ್ಕದ್ದು.

**[ಊ] ಇತರೆ ಶಿಕ್ಷಕಿಯರು**

**[ಋ] <u>ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಸ್ಥೆಗಳ ಚುನಾಯಿತ ಪದಾಧಿಕಾರಿಗಳು:–</u>** ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಶಿಕ್ಷಕರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿದ್ದಲ್ಲಿ ಸಂಘದವರಿಂದ ಪ್ರಮಾಣಿಕರಿಸಿರುವ ಪ್ರಮಾಣ ಪತ್ರಗಳನ್ನು ಪಡೆದು. ಹಾಜರುಪಡಿಸುವುದು. ನಾಮ ನಿರ್ದೇಶನ ಮಾಡಿಕೊಂಡ ಪದಾಧಿಕಾರಿಗಳು ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

**[ಎ] ಇತರೆ ಶಿಕ್ಷಕರು**

4. **<u>ಖಾಯಂ ಪೂರ್ವ ಸೇವಾ ಅವಧಿ:–</u>** ಖಾಯಂ ಪೂರ್ವ ಸೇವಾ ಅವಧಿ ಪೂರೈಸದ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಯಾವುದೇ ತರಹದ (ಕೋರಿಕೆ, ಪರಸ್ಪರ) ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

5. **<u>ಮೂರು ವರ್ಷಗಳ ಅವಧಿಯವರೆಗೆ 11ನೇ ನಿಯಮದಡಿಯಲ್ಲಿ ಕೌನ್ಸಿಲಿಂಗ್‌ಗೆ ಅರ್ಹರಾಗಿರತಕ್ಕದ್ದಲ್ಲ:–</u>** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007,ರ 15ನೇ ನಿಯಮದಡಿಯಲ್ಲಿ ಬಿಡುಗಡೆಯಾದಂತ ಅರ್ಜಿದಾರರು, ಮುಂದಿನ ಮೂರು ವರ್ಷಗಳ ಅವಧಿಯವರೆಗೆ ವರ್ಗಾವಣೆಗೆ ಸಂಬಂಧಿಸಿದಂತೆ 11ನೇ ನಿಯಮದಡಿಯಲ್ಲಿ ಕೌನ್ಸಿಲಿಂಗ್‌ಗೆ ಅರ್ಹರಾಗಿರತಕ್ಕದ್ದಲ್ಲ.

6. **<u>ಇಲಾಖಾ ವೆಬ್ ಸೈಟ್‌ನಲ್ಲಿ ಮಾಹಿತಿ:–</u>** ವರ್ಗಾವಣಾ ವೇಳಾ ಪಟ್ಟಿಯಂತೆ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ನಿಯಮಾನುಸಾರ ನಡೆಸಬೇಕಾಗಿದ್ದು, ವರ್ಗಾವಣೆ ಬಗ್ಗೆ ಕಾಲಕಾಲಕ್ಕೆ ಹೆಚ್ಚಿನ ಮಾಹಿತಿ ಇತ್ಯಾದಿ ವಿಷಯದ ಬಗ್ಗೆ ಅಧಿಸೂಚನೆ : ಆದೇಶ : ಸುತ್ತೋಲೆಗಳನ್ನು ಹೊರಡಿಸಿದಲ್ಲಿ ಈ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಪ್ರತಿದಿನ ಇಲಾಖಾ Web Site ನೋಡಿ ಮಾಹಿತಿ ಪಡೆದುಕೊಳ್ಳಲು ತಿಳಿಸಿದೆ.

7. **<u>ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳು:–</u>** ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅದನ್ನು ಸಮರ್ಥಿಸುವ ದಾಖಲೆಗಳೊಂದಿಗೆ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಸಲ್ಲಿಸತಕ್ಕದ್ದು.

## <u>ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಗಳು</u>

8. **<u>ಖಾಲಿ ಹುದ್ದೆಗಳನ್ನು up date ಮಾಡುವುದು:–</u>** ಈ ಕಛೇರಿಯ ಪತ್ರ ಸಂಖ್ಯೆ ಸಿ1(6) ವಿ.ವೃಂ. ವರ್ಗಾವಣೆ–04/11–12 ದಿನಾಂಕ: 25.04.2011ರಂತೆ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಖಾಲಿ ಹುದ್ದೆಗಳ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ದಿನಾಂಕ: 30.04..2011 ರೊಳಗೆ ಈ ಕಛೇರಿಗೆ ಸಲ್ಲಿಸುವುದು.

9. **ವರ್ಗಾವಣೆ ಅರ್ಜಿಗಳ ಪರಿಶೀಲನೆ:–** ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳು ಅಂತರ್ಜಾಲದ [On Line] ಮೂಲಕ ಸಲ್ಲಿಸಿದ ವರ್ಗಾವಣೆ ಅರ್ಜಿಗಳಲ್ಲಿನ ಸೇವಾ ವಿವರಗಳು [ಹೆಸರು, ಜನ್ಮ ದಿನಾಂಕ, ಪದನಾಮ, ಶಾಲಾ, ಕಾಲೇಜು, ಕಚೇರಿ ವಿಳಾಸ, ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಸೇವಾ ವಿವರ, ಬಯಸಿರುವ ಆದ್ಯತೆ, ಇತ್ಯಾದಿ] ಸರಿಯಿದೆಯೇ ಎಂಬುದನ್ನು ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ಪರಿಶೀಲಿಸತಕ್ಕದ್ದು ಮತ್ತು ಅಭ್ಯರ್ಥಿ ಸಮ್ಮುಖದಲ್ಲಿ ಪ್ರಮಾಣೀಕರಿಸತಕ್ಕದ್ದು.

10. **ಪರಸ್ಪರ ವರ್ಗಾವಣೆಗೆ ಅರ್ಜಿಗಳ ಪರಿಶೀಲನೆ:–** ಪರಸ್ಪರ ವರ್ಗಾವಣೆಗೆ ಸಲ್ಲಿಸಿರುವ ಒಂದೇ ಅರ್ಜಿಯನ್ನು ಅಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು, ಅಧಿಕಾರಿ–1 ಮತ್ತು ಅಧಿಕಾರಿ–2ರ ಮಾಹಿತಿ ಸರಿ ಇದೆ ಎಂಬುದನ್ನು ಪರಿಶೀಲಿಸಿ ಸರಿ ಇದ್ದಲ್ಲಿ ಅನುಮೋದನೆ ನಿಡತಕ್ಕದ್ದು. ಇಬ್ಬರು ಅಧಿಕಾರಿಗಳು ಒಂದೇ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ ಅಧಿಕಾರಿ–1ರ ಮಾಹಿತಿ ಸರಿ ಇದೆ ಎಂಬುದನ್ನು ಪರಿಶೀಲಿಸಿ ಅನುಮೋದನೆ ನೀಡತಕ್ಕದ್ದು. ಮತ್ತು ಅಧಿಕಾರಿ–2ರ ಮಾಹಿತಿ ಸರಿ ಇದೆ ಎಂಬುದನ್ನು ಸಹ ಪರಿಶೀಲಿಸಿ ಅನುಮೋದನೆ ನೀಡತಕ್ಕದ್ದು.

ಒಂದೇ ಕ್ಲಸ್ಟರ್ (ಸಮೂಹ) ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣಗಳನ್ನು ಪರಿಗಣಿಸತಕ್ಕದ್ದಲ್ಲ.

11. **ಆಯಾ ವೃಂದದಲ್ಲಿ ಸಲ್ಲಿಸಿದ ಸೇವೆಯ ವೆಯಿಟೇಜ್ ಬಗ್ಗೆ ಪರಿಶೀಲನೆ:–** ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿನಾಂಕ: 14.11.2007 ರಲ್ಲಿ ಅಧಿಸೂಚಿಸಲಾಗಿರುವ ಅನುಸಾರ ಎ, ಬಿ, ಸಿ ವಲಯಗಳ ಪ್ರಕಾರ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 37 ಇಟಿಆರ್ 2009, ದಿನಾಂಕ: 23.04.2011ರಲ್ಲಿ ನಿಯಮ 7 (2)ಕ್ಕೆ ಪ್ರತಿಯೋಜಿಸಿರುವಂತೆ ಪ್ರಸ್ತುತ ವೃಂದದಲ್ಲಿನ ಎಲ್ಲಾ ಸ್ಥಳಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಅರ್ಜಿ ಸಲ್ಲಿಸುವ ದಿನಾಂಕದವರೆಗೆ ಸರಿಯಾಗಿ ದಾಖಲು ಮಾಡಿದ್ದಾರೆಯೆ ಎಂಬ ಬಗ್ಗೆಯೂ ಸಹ ಜಿಲ್ಲಾ ಉಪನಿರ್ದೇಶಕರು [ಆಡಳಿತ] ರವರು On Line ನಲ್ಲಿ ಪರಿಶೀಲಿಸಿ ಪ್ರಮಾಣೀಕರಿಸತಕ್ಕದ್ದು.

**ಉದಾ:–** ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಸೇವೆಗೆ [ಬಡ್ತಿ] ಸೇರಿದ ದಿನಾಂಕದಿಂದ ಮಾತ್ರ ವೆಯಿಟೆಜ್ ಅಂಕಗಳನ್ನು ಪರಿಗಣಿಸಿ ಸಿದ್ದಪಡಿಸುವುದು.

12. **ವರ್ಗಾವಣೆ ಅರ್ಜಿಗಳ ಅನುಮೋದನೆ:–** ಇಲಾಖೆಯ On Line ನಲ್ಲಿ ದಾಖಲಾದ ಅರ್ಜಿಗಳನ್ನು ಪ್ರತಿದಿನ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ರವರು ಅವರಿಗೆ ನೀಡಿದ user ID ಮತ್ತು password ಗಳನ್ನು ಉಪಯೋಗಿಸಿ On Line ಗೆ ಪ್ರವೇಶ ಪಡೆದು ಅರ್ಜಿ ಸಲ್ಲಿಸಿರುವವರ ಸಮ್ಮುಖದಲ್ಲಿ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಬೇಕು. ಮಾಹಿತಿಗಳು ಸರಿ ಇವೆ ಎಂದು ಖಚಿತವಾದ ನಂತರ ಅಥವಾ ತಿದ್ದುಪಡಿ ಮಾಡಿದ ನಂತರ ಅರ್ಜಿಯನ್ನು ಅನುಮೋದಿಸಿ, ಅನುಮೋದಿತ ಅರ್ಜಿಯ ಪ್ರತಿಯನ್ನು ಮುದ್ರಿಸಿ ಸಹಿ ಮತ್ತು ಸೀಲು ಹಾಕಿ ದೃಢೀಕರಿಸಿ ಒಂದು ಪ್ರತಿಯನ್ನು ಉಪನಿರ್ದೇಶಕರ ಕಛೇರಿಯಲ್ಲಿ ರಕ್ಷಾ ಕಡತದಲ್ಲಿಡುವುದು. (ಆದ್ಯತೆಗೆ ಸಂಬಂಧಿಸಿದ ದಾಖಲೆಗಳ ಫೋಟೊ ಪ್ರತಿಯೊಂದಿಗೆ) ಹಾಗೂ ಅರ್ಜಿದಾರರಿಗೆ ಒಂದು ಪ್ರತಿಯನ್ನು ದೃಡೀಕರಿಸಿ ನೀಡುವುದು.

13. **ಆಧ್ಯತಾ ಪ್ರಮಾಣ ಪತ್ರಗಳ ಪರಿಶೀಲನೆ:–** ಆಧ್ಯತೆ ಬಯಸಿ ಅರ್ಜಿ ಸಲ್ಲಿಸಿರುವ ಅಧಿಕಾರಿಗಳ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರ ನೀಡಿರುವ ಮೂಲ ಪ್ರಮಾಣ ಪತ್ರಗಳೊಂದಿಗೆ ಪರಿಶೀಲಿಸಿ ಆಧ್ಯತೆಗೆ ಅರ್ಹವಿದ್ದಲ್ಲಿ ಮಾತ್ರ ಆದ್ಯತೆಗೆ ಪರಿಗಣಿಸತಕ್ಕದ್ದು. ಇಲ್ಲವಾದಲ್ಲಿ ಇತರೆ ಶಿಕ್ಷಕಿ, ಅಥವಾ ಇತರೆ ಶಿಕ್ಷಕರ ಪ್ರಕರಣಗಳಲ್ಲಿ ಪರಿಗಣಿಸತಕ್ಕದ್ದು.

14. **ಅರ್ಜಿ ಹಾಗೂ ಆಧ್ಯತಾ ಪ್ರಮಾಣ ಪತ್ರಗಳನ್ನು ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು;–** ಉಪನಿರ್ದೇಶಕರು [ಆಡಳಿತ] ಇವರು ಅಭ್ಯರ್ಥಿಗಳ ಅರ್ಜಿ ಮತ್ತು ಆದ್ಯತೆಯ ಮೂಲ ಪ್ರಮಾಣ ಪತ್ರಗಳನ್ನು ಕ್ರೂಢೀಕರಿಸಿ ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಕ್ಕೆ ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಲ್ಲಿಸತಕ್ಕದ್ದು. (ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಸಂಬಂಧಿಸಿದವರು ಆಯುಕ್ತರು, ಸಾ.ಶಿ. ಇಲಾಖೆ ಇವರಿಗೆ ಹಾಗೂ ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದವರು ಅಪರ ಆಯುಕ್ತರು ಧಾರವಾಡ ಇವರಿಗೆ ಮತ್ತು ಗುಲ್ಬರ್ಗ ವಿಭಾಗಕ್ಕೆ ಸಂಬಂಧಿಸಿದವರು ಅಪರ ಆಯುಕ್ತರು ಗುಲ್ಬರ್ಗ ಇವರಿಗೆ)

15. **ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳು:–** ಆದ್ಯತಾ ಪಟ್ಟಿಗೆ ಆಕ್ಷೇಪಣೆಗಳೇನಾದರೂ ಬಂದಲ್ಲಿ ಸಮರ್ಥಿಸುವ ದಾಖಲೆಗಳೊಂದಿಗೆ ಪರಿಶೀಲಿಸಿ ಕ್ರೂಢೀಕೃತ ಮಾಹಿತಿಯನ್ನು ಸೂಕ್ತ ಷರಾ ಹಾಗೂ ದಾಖಲೆಗಳೊಂದಿಗೆ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಯಾವುದೇ ಆಕ್ಷೇಪಣೆಗಳು ಇಲ್ಲದಿದ್ದಲ್ಲಿ ಶೂನ್ಯ ವರದಿಯನ್ನು ಸಲ್ಲಿಸತಕ್ಕದ್ದು.

16. **ಇಲಾಖಾ ವೆಬ್ ಸೈಟ್‌ನಲ್ಲಿ ಮಾಹಿತಿ:–** ವರ್ಗಾವಣಾ ವೇಳಾ ಪಟ್ಟಿಯಂತೆ ನಿಗದಿತ ಅವಧಿಯಲ್ಲಿ ಎಲ್ಲಾ ಕಾರ್ಯಗಳನ್ನು ನಿಯಮಾನುಸಾರ ನಡೆಸಬೇಕಾಗಿದ್ದು, ವರ್ಗಾವಣೆ ಬಗ್ಗೆ ಕಾಲಕಾಲಕ್ಕೆ ಹೆಚ್ಚಿನ ಮಾಹಿತಿ ಇತ್ಯಾದಿ ವಿಷಯದ ಬಗ್ಗೆ ಅಧಿಸೂಚನೆ : ಆದೇಶ : ಸುತ್ತೋಲೆಗಳನ್ನು ಹೊರಡಿಸಿದಲ್ಲಿ ಈ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಪ್ರತಿದಿನ ಇಲಾಖಾ Web Site ನೋಡಿ ಮಾಹಿತಿ ಪಡೆದುಕೊಳ್ಳಲು ತಿಳಿಸಿದೆ.

17. **ಸಕ್ಷಮ ಪ್ರಾಧಿಕಾರದ ಕರ್ತವ್ಯಗಳು**:– ಉಲ್ಲೇಖಿತ ಸರ್ಕಾರದ ಆದೇಶಗಳನ್ವಯ ಹಾಗೂ ವೇಳಾಪಟ್ಟಿಯ ಪ್ರಕಾರ 2011ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಪರಿವೀಕ್ಷಕರು/ವಿಷಯ ಪರಿವೀಕ್ಷಕರು (ವೃತ್ತಿ) ವೃಂದದ ಅಧಿಕಾರಿಗಳ ವರ್ಗಾವಣೆಗಳನ್ನು ಸಕ್ಷಮ ಪ್ರಾಧಿಕಾರಿಗಳು ಅವರವರ ಆಡಳಿತ ವ್ಯಾಪ್ತಿಯಲ್ಲಿ ಮಾಡಲು ಅಪರ ಆಯುಕ್ತರು ಗುಲ್ಬರ್ಗಾ ಮತ್ತು ಅಪರ ಆಯುಕ್ತರು, ಧಾರವಾಡ ರವರು ಕ್ರಮ ವಹಿಸುವಂತೆ ಕೋರಿದೆ.

[ಆಯುಕ್ತರ ಆದೇಶದ ಮೇರೆಗೆ]

ಆಯುಕ್ತರ ಪರವಾಗಿ
ಜಂಟಿ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು 26/4/11

ಗೆ,

ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ

ಪ್ರತಿಯನ್ನು:-

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
8. ಸಹ ನಿರ್ದೇಶಕರು-1 ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು
11. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
12. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
13. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ
14. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
15. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು
16. ಶ್ರೀ ಶಿವಕುಮಾರ್ ಪ್ರೋಗ್ರಾಮರ್, ಇ-ಆಡಳಿತ ಘಟಕ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
17. ಕಛೇರಿ ಪ್ರತಿ